ರೀತಿಯ ಒತ್ತಡಗಳಿಂದಲೇ ನಾನು ಬರೆಯಲು ಸಾಧ್ಯವಾಗಿದ್ದು.

ವೃತ್ತಿಪರ ವಿಮರ್ಶಕ ಆದಮೇಲೆ ಅದರ ಬಗ್ಗೆ ಬರೀತೀನಿ, ಇದರ ಬಗ್ಗೆ ಮಾತ್ರ ಬರೀತೀನಿ ಅಂತ ಹಟ ಹಿಡಿಯಲಿಕ್ಕಾಗುವುದಿಲ್ಲ. ಯಾವುದೇ ಪುಸ್ತಕವನ್ನಾದರೂ ತನ್ನ ವಿಮರ್ಶನ ತತ್ತ್ವಗಳಿಗೆ ಅಪಚಾರ ಆಗದ ಹಾಗೆ ಬರೆಯುವ ಶಕ್ತಿ ವೃತ್ತಿಪರ ವಿಮರ್ಶಕನಿಗೆ ಬೇಕಾಗುತ್ತದೆ. ಆ ವೃತ್ತಿಪರತೆಯನ್ನು ಬೆಳೆಸಿಕೊಂಡೆ ನಾನು.

**● ಅನಕೃ ಜನಪ್ರಿಯ ಲೇಖಕ ಎಂದು ಎಲ್ಲರೂ ನಿರ್ಲಕ್ಷಿಸಿದ್ದ ಸಮಯದಲ್ಲಿ ಅವರ ಬಗ್ಗೆ ನೀವೊಂದು ಕೃತಿ ಬರೆದಿರಿ. ಆ ಕುರಿತು ಆಸಕ್ತಿ ಹುಟ್ಟಿದ್ದು ಹೇಗೆ?**

ಅನಕೃ ಬಗ್ಗೆ ಸಾಹಿತ್ಯ ಅಕಾಡೆಮಿಗೆ ಒಂದು ಪುಸ್ತಕ ಬರೆದುಕೊಟ್ಟಿದ್ದೆ. ಅಲ್ಲಿಯವರೆಗೆ ಅನಕೃ ಎಸ್ಟಾಬ್ಲಿಶ್‌ಮೆಂಟ್‌ನ ಹೊರಗೆ ಇದ್ದರು. ಅವರನ್ನು ನಿರ್ಲಕ್ಷ್ಯ ಮಾಡಲಾಗಿತ್ತು. ಅವರ ಬಗ್ಗೆ ಗಂಭೀರವಾಗಿ ಬರೆಯುವಂಥದು ಏನೂ ಇಲ್ಲ ಎಂಬ ಮನೋಭಾವ ಇತ್ತು. ನನಗೆ ಸಾಹಿತ್ಯ ಅಕಾಡೆಮಿಯವರು ಅನಕೃ ಬಗ್ಗೆ ಬರೆಯಿರಿ ಅಂತ ಕೇಳಿದರು. ನಾನಾಗ ಔರಂಗಾಬಾದ್‌ನಲ್ಲಿದ್ದೆ. ಅವರ ಪುಸ್ತಕಗಳು ಅಲ್ಲೆಲ್ಲಿ ಸಿಗಬೇಕು? ಆದರೆ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಅನಕೃ ಅವರ ಸಮಗ್ರ ಕೃತಿ ಸಂಗ್ರಹ ಇತ್ತು. ಅಲ್ಲಿಂದ ತರಿಸಿಕೊಂಡು ಓದಿ ಪುಸ್ತಕ ಬರೆದೆ. ಅದನ್ನು ನೋಡಿದ ನನ್ನ ಆಪ್ತಮಿತ್ರರೆಲ್ಲ ನಾನು ಏನೋ ತಪ್ಪು ಮಾಡಿದ್ದೇನೆ, ನಾಚಿಕೆ ತರಿಸುವಂಥ ಕೆಲಸ ಮಾಡಿದ್ದೇನೆ ಎನ್ನುವ ಹಾಗೆ ಮಾತಾಡಿದರು. ನನ್ನ ಮಿತ್ರ ಶಾಂತಿನಾಥ ದೇಸಾಯಿ ಅವರೂ 'ಎಲ್ಲ ಬಿಟ್ಟು ಅನಕೃ ಬಗ್ಗೆ ಯಾಕೆ ಬರೆಯಲಿಕ್ಕೆ ಹೋದೆ' ಎಂದು ಕೇಳಿದ್ದರು. 'ಏನೋ ಕೇಳಿದ್ರು, ಬರೆದುಕೊಟ್ಟೆ' ಎಂದು ಕೊಂಚ ಪಶ್ಚಾತ್ತಾಪದ ಧ್ವನಿಯಲ್ಲಿಯೇ ಹೇಳಿದ್ದೆ. ಆದರೆ ಇದು ತಪ್ಪು. ಅನಕೃ ವೃತ್ತಿಪರ ಬರಹಗಾರ ಆಗಿದ್ದರಿಂದ ಅವರ ಬರವಣಿಗೆಗೆ ಸ್ಥಿರತೆ ಇರಲಿಲ್ಲ. ಸಾಕಷ್ಟು ಕೆಟ್ಟ ಕಾದಂಬರಿ ಬರೆದಿದ್ದಾರೆ. ಆದರೆ ಅವರ 'ಸಂಧ್ಯಾರಾಗ' ಒಳ್ಳೆಯ ಕಾದಂಬರಿ. ಆ ಕಾದಂಬರಿ ಬಗ್ಗೆ ಮತ್ತೆ ಮತ್ತೆ ಬರೆದೆ. ಅಲ್ಲದೆ ಅನಕೃ ಅವರಿಗೆ ಕಲೆಯ ಬಗ್ಗೆಯೆಲ್ಲ ಆಳ ಜ್ಞಾನವಿತ್ತು. ಸಂಗೀತದ ಜ್ಞಾನವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಅವರು ತಮ್ಮ ಸಹಲೇಖಕರ ಬಗ್ಗೆ ತುಂಬ ಪ್ರೀತಿಯಿಂದ ಸಾಕಷ್ಟು ಬರೆದಿದ್ದಾರೆ. ಅವರ ಬಗ್ಗೆ ಪುಸ್ತಕ ಬರೆದಿದ್ದಕ್ಕೆ ನನಗೆ ಯಾವ ಪಶ್ಚಾತ್ತಾಪವೂ ಇಲ್ಲ.

**● 'ಭುವನದ ಭಾಗ್ಯ' ಬೇಂದ್ರೆ ಸಮಗ್ರ ಕಾವ್ಯದ ವಿಶ್ಲೇಷಣೆ. ಅದಾದಮೇಲೆ 'ಬೇಂದ್ರೆ ಕಾವ್ಯದ ಪ್ರತಿಮಾಲೋಕ' ಎನ್ನುವ ಇನ್ನೊಂದು ಕೃತಿಯನ್ನೂ ಬರೆದಿರಿ. ಜೊತೆಗೆ ಬೇಂದ್ರೆಯವರ ಕೆಲವು ಮುಖ್ಯ ಕವಿತೆಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದೀರಿ. ಇಷ್ಟು ದೀರ್ಘ ಕಾಲ ಒಬ್ಬ ಕವಿಯನ್ನು ಅಧ್ಯಯನ ಮಾಡಿದ ಇನ್ನೊಬ್ಬ ವಿಮರ್ಶಕ ಕನ್ನಡದಲ್ಲಿಲ್ಲ ಅಂತ ನನ್ನ ಭಾವನೆ.**

ಇತ್ತೀಚೆಗೆ ಪ್ರಕಟವಾದ ಕೃತಿ 'ಒಮ್ಮುಖ'ದಲ್ಲಿ ಕೂಡ ಬೇಂದ್ರೆಯವರ ಅನುವಾದದ ಬಗ್ಗೆ ಬರೆದಿದ್ದೇನೆ. ಬೇಂದ್ರೆಯವರ ಬಗ್ಗೆ ಬರೆದಿದ್ದೂ ಆಕಸ್ಮಿಕವೇ. ಮೊದಲನೇ ಪಂಪ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯ ನಾನು. ಅಲ್ಲಿ ವಿ.ಕೃ. ಗೋಕಾಕರೂ ಇದ್ದರು. ನಾನು ಅನಕೃ ಬಗ್ಗೆ ಬರೆದಿದ್ದ ಕೃತಿಯನ್ನು ಅವರು ಓದಿದ್ದರು. ಡಿವಿಜಿ ಬಗ್ಗೆ ಅಥವಾ ವಿ.ಸೀ. ಬಗ್ಗೆ ಅಂಥ ಒಂದು ಪುಸ್ತಕ ಬರೆದುಕೊಡು ಎಂದರು. ಡಿವಿಜಿ ಅವರ ವಿಸ್ತಾರವಾದ ವ್ಯಾಪ್ತಿಯನ್ನು ಹಿಡಿಯುವುದು ಕಷ್ಟ ಎನಿಸಿತು. ವಿ.ಸೀ. ನನಗೆ ಆಪ್ತರಾಗಿದ್ದರು. ಅವರ ಬಗ್ಗೆ ಬರೆಯಬಹುದು ಎಂದೆ. ಆಮೇಲೆ ಬೇಂದ್ರೆ ಅವರ ಬಗ್ಗೆ ಪ್ರಸ್ತಾಪವಾದಾಗ ಅವರ ಬಗ್ಗೆ ಪೂರ್ಣ ಪ್ರಮಾಣದ ಒಂದೂ ಪುಸ್ತಕ ಇಲ್ಲವಲ್ಲ ಎನಿಸಿತು. ಗೋಕಾಕರು ಬೇಂದ್ರೆಗೆ ಆಪ್ತರಾಗಿದ್ದರು. ಹಾಗಾಗಿ, 'ಬೇಂದ್ರೆ ಅವರ ಬಗ್ಗೆ ನೀವು ಪುಸ್ತಕ ಬರೆಯುವುದಾದರೆ ಬರೆಯಿರಿ. ಇಲ್ಲದಿದ್ದರೆ ನಾನೇ ಬರೆಯುತ್ತೇನೆ' ಎಂದೆ. ಅವರು 'ನೀವೇ ಬರೆಯಿರಿ' ಎಂದು ಖುಷಿಯಿಂದಲೇ ಒಪ್ಪಿಕೊಂಡರು. ವಸ್ತುಸಂಗ್ರಹಕ್ಕೆ ತೊಡಗಿದಾಗ ನನಗೆ